**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ಪರಿಶಿಷ್ಟ ಜಾತಿ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಅದರಗುಂಚಿ, ಧಾರವಾಡ ಜಿಲ್ಲೆ, ಈ ಶಾಲೆಯ ಖಾಸಗಿ ಕಟ್ಟಡಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು..

**ಓದಲಾಗಿದೆ:-** ಪತ್ರ ಸಂಖ್ಯೆ:ಕವಶಿಸಸ/ಸಿಆರ್(ಶಿಕ್ಷಣ)-63/2008-09, ದಿ:28.08.2012.

*****

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ 2008-09ನೇ ಸಾಲಿಗೆ ಮಂಜೂರಾದ ಪರಿಶಿಷ್ಟ ಜಾತಿ ಮೊರಾರ್ಜಿ ದೇಸಾಯಿ ವಸತಿ ಶಾಲೆ, ತರ್ಲಘಟ್ಟ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ, ಈ ವಸತಿ ಶಾಲೆಗೆ ಸ್ವಂತ ಕಟ್ಟಡ ಲಭ್ಯವಿಲ್ಲದ ಕಾರಣ ಅದರಗುಂಚಿ ಗ್ರಾಮದಲ್ಲಿನ ಸಿ.ಐ.ಸಿ ಗ್ರಾಮೀಣ ಶಿಕ್ಷಣ ಸಂಸ್ಥೆ, ಇವರ ಮಾಲೀಕತ್ವದ ಅದರಗುಂಚಿ ಕಟ್ಟಡದಲ್ಲಿ ದಿನಾಂಕ:01.11.2011ರಿಂದ ನಡೆಸಲಾಗುತ್ತಿದ್ದು, ಸದರಿ ಬಾಡಿಗೆ ಕಟ್ಟಡಕ್ಕೆ ಲೋಕೋಪಯೋಗಿ ಇಲಾಖೆಯವರು ಮಾಹೆಯಾನ ರೂ.69,650/-(ಅರವತ್ತೊಂಬತ್ತು ಸಾವಿರದ ಆರುನೂರ ಐವತ್ತು ರೂಪಾಯಿಗಳು ಮಾತ್ರ)ಗಳಿಗೆ ಮಾಸಿಕ ಬಾಡಿಗೆಯನ್ನು ನಿಗಧಿಪಡಿಸಿದ್ದು, ದಿನಾಂಕ:01.11.2011ರಿಂದ ಪಾವತಿಸಲು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು. ಇವರು ಆಡಳಿತಾತ್ಮಕ ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

---

**ಸರ್ಕಾರಿ ಆದೇಶ ಸಂಖ್ಯೆ:ಸಕಇ 162 ಮೋದೇಶಾ 2012 ಬೆಂಗಳೂರು,**
**ದಿನಾಂಕ:19-12-2012,**

ಸಿ.ಐ.ಸಿ ಗ್ರಾಮೀಣ ಶಿಕ್ಷಣ ಸಂಸ್ಥೆ, ಅದರಗುಂಚಿ, ಇವರ ಮಾಲೀಕತ್ವದ ಕಟ್ಟಡದಲ್ಲಿ ದಿನಾಂಕ:01-11-2011ರಿಂದ ನಡೆಸಲಾಗುತ್ತಿರುವ ಪರಿಶಿಷ್ಟ ಜಾತಿ ಮೊರಾರ್ಜಿ ದೇಸಾಯಿ ವಸತಿ ಶಾಲೆ, ತರ್ಲಘಟ್ಟ, ಕುಂದಗೋಳ, ಧಾರವಾಡ, ಈ ವಸತಿ ಶಾಲೆಯ ಕಟ್ಟಡಕ್ಕೆ ಲೋಕೋಪಯೋಗಿ ಇಲಾಖೆಯವರು ಮಾಹೆಯಾನ ನಿಗಧಿಪಡಿಸಿದ ರೂ.69,650/-(ಅರವತ್ತೊಂಬತ್ತು ಸಾವಿರದ ಆರುನೂರ ಐವತ್ತು ರೂಪಾಯಿಗಳು ಮಾತ್ರ)ಗಳಂತೆ ಬಾಡಿಗೆಯನ್ನು ದಿನಾಂಕ:01.11.2011ರಿಂದ ಅನ್ವಯಿಸುವಂತೆ ಹಾಗೂ TDS ಆದಾಯ ತೆರಿಗೆಯನ್ನು ನಿಯಮಾನುಸಾರ ಕೇಂದ್ರ ಸರ್ಕಾರದ ಲೆಕ್ಕಕ್ಕೆ ಜಮೆಗೊಳಿಸುವ ಷರತ್ತಿನೊಂದಿಗೆ ಕಟ್ಟಡದ ಮಾಲೀಕರಿಗೆ ಬಾಡಿಗೆ ಪಾವತಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂ:ಸಕಕಾ 343 ಆಂಆಸ 2012, ದಿನಾಂಕ:06-11-2012 ರಲ್ಲಿ ನೀಡಿರುವ ಸಹಮತಿ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 1996 ದಿನಾಂಕ:10-07-1996ರಲ್ಲಿ ಸರ್ಕಾರದ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ವಿ.ರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

ಗೆ,

1. ಮಹಾಲೇಖಪಾಲರು,(ಎ ಮತ್ತು ಇ)(ಲೆಕ್ಕ ಪರಿಶೋಧನೆ-1) (ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು
2. ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ
3. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ
4. ಕಾರ್ಯನಿರ್ವಾಹಕ ನಿರ್ದೇಶಕರು,ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
5. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಖಜಾನಾಧಿಕಾರಿಗಳು, ಧಾರವಾಡ, ಧಾರವಾಡ ಜಿಲ್ಲೆ
7. ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ, ಜಿಲ್ಲಾ ಅಧಿಕಾರಿ ಧಾರವಾಡ, ಧಾರವಾಡ ಜಿಲ್ಲೆ
8. ಸಿ.ಐ.ಸಿ ಗ್ರಾಮೀಣ ಶಿಕ್ಷಣ ಸಂಸ್ಥೆ, ಧಾರವಾಡ, ಧಾರವಾಡ ಜಿಲ್ಲೆ